| | | |
|---|---|---|
| ಓ ಎಸ್ | 72/2017 | ಡಿ.ಡಬ್ಲ್ಯೂ 1 |

ಇಂದು ದಿಃ 8/9/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಡಿ ವಕೀಲರಿಂದಃ-

ದಾವಾಸ್ವತ್ತುಗಳು ಸಕಲೇಶಪ್ಪ ರವರ ಸ್ವಯಾರ್ಜಿತ ಸ್ವತ್ತು ಎಂದರೆ ನಿಜ. ಅವರು ಜೀವವಿತಾವತಿದಿಯಲ್ಲಿ ಸದರಿ ಸ್ವತ್ತಿನಬಗ್ಗೆ ಯಾವುದೇ ಪತ್ರ ಬರೆದುಕೊಟ್ಟಿಲ್ಲ ಅಥವಾ ಬರೆದಿಟ್ಟಿಲ್ಲ ಎಂದರೆ ನಿಜ. ವಾದಿಗಳು ಹಾಗು 1 ರಿಂದ 3 ನೇ ಪ್ರತಿವಾದಿಗಳಿಗೆ ಮಾತ್ರ ಸದರಿ ಸ್ವತ್ತು ಸೇರತಕ್ಕದ್ದು ಎಂದರೆ ನಿಜ.

ಪಾಟೀ ಸವಾಲುಃ ಶ್ರೀ ಎಂ ಜೆ ಎಸ್ ವಕೀಲರಿಂದಃ

1996 ನೇ ಇಸವಿಯಲ್ಲಿ ನನಗೆ 15 ವರ್ಷ ವಯಸ್ಸಾಗಿತ್ತು ಎಂದರೆ ನಿಜ. ಅವಾಗ ನಾನು ಮೈಸೂರಿನಲ್ಲಿ ವಾಸವಿದ್ದೆ. 1 ನೇ ಪ್ರತಿವಾದಿ ನನ್ನ ತಾಯಿಕೂಡ ನನ್ನ ಜೊತೆ ವಾಸವಿದ್ದರು. ನನ್ನ ತಾತ ಹಾಗು ನನ್ನ ತಾಯಿ ಪರಸ್ಪರ ಯಾವುದೇ ವೈಮನಸ್ಸು ಹೋಂದಿರಲಿಲ್ಲ. ನಾನು ನನ್ನ ತಾತ ಸಕಲೇಶಪ್ಪನ ಮನೆಗೆ ನಂಜನಗೂಡಿಗೆ ನನ್ನ ತಾಯಿಜೊತೆ ಬಂದುಹೋಗುತ್ತಿದ್ದೆ. 1996 ನೇ ಇಸವಿಯಲ್ಲಿ ನನ್ನ ತಾತ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. 1996 ನೇ ಇಸವಿಯಲ್ಲಿ ನನ್ನ ತಾತ ಶಾಮಿಯಾನ ಬಾಡಿಗೆಗೆ ಕೊಡುವ ವ್ಯಾಪಾರ ಮಾಡುತ್ತಿದ್ದರು. ಅದನ್ನು ಅವರೇ ನಿಭಾಯಿಸುತ್ತಿದ್ದರು.

1996 ನೇ ಇಸವಿಯಲ್ಲಿ ನನ್ನ ತಾತ ಒಂದು ಮರಣಶಾಸನವನ್ನು ಬರೆಸಿ ನೋಂದಣಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಗಳು ಸದರಿ ಮರಣಶಾಸನವನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದನ್ನು ಓದಿಸಿ ತಿಳಿದುಕೊಂಡಿದ್ದೇನೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ಸದರಿ ಪತ್ರ ನೋಂದಣಿಪತ್ರವಾಗಿದ್ದು ಅದರ ಒಕ್ಕಣೆಯಲ್ಲಿ ಸಕಲೇಶಪ್ಪರವರು ಸದರಿ ಪತ್ರವನ್ನು ಬರೆಸುವಾಗ ಅವರ ಬುದ್ದಿಶಕ್ತಿ ಚನ್ನಾಗಿತ್ತು ಎಂಬುದನ್ನು ನಮೂದಿಸಿದ್ದಾರೆ ಎಂದರೆ

| ಓ ಎಸ್ | 72/2017 | ಡಿ.ಡಬ್ಲ್ಯೂ: 1 |
|---|---|---|

ಸರಿಯಲ್ಲ. ಸದರಿ ಮರಣಶಾಸನದಲ್ಲಿ ನನ್ನ ತಾಯಿಗೂ ಕೂಡ ಒಂದು ಭಾಗವನ್ನು ಬರೆದಿಟ್ಟಿದ್ದಾರೆ ಎಂದರೆ ಆರೀತಿ ಪತ್ರವನ್ನೇಮಾಡಿಲ್ಲ ಎಂದು ನುಡಿಯುತ್ತೇನೆ ಸದರಿ ಮರಣಶಾಸನದಲ್ಲಿ ಎಲ್ಲರಿಗೂ ಒಂದೊಂದುಭಾಗವನ್ನು ಬರೆದಿಟ್ಟಿದ್ದು ಅದು ಅವತ್ತಿನ ಕಾನೂನನಿನ ಪ್ರಕಾರ ಸೂಕ್ತವಾಗಿದ್ದು ಆರೀತಿ ಪರಿಗಣಿಸಿದಾಗ ಯಾರಿಗೂ ಅನ್ಯಾಯವಾಗಿಲ್ಲ ಎಂದರೆ ಆರೀತಿಪತ್ರ ಬರೆದಿಲ್ಲ ಎಂದು ನುಡಿಯುತ್ತೇನೆ 1999 ನೇ ಇಸವಿಯಲ್ಲಿ ನನ್ನ ತಾತ ತೀರಿಕೊಂಡಿದ್ದು ಎಂದರೆ ನಿಜ. ಸದರಿ ಮರಣಶಾಸನಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ ನಂತರವಾದರೂ ಅದಕ್ಕೆ ಸಂಬಂಧಪಟ್ಟಂತೆ ಏನಾದರೂ ತಿದ್ದುಪಡಿಯನ್ನು ಲಿಖಿತತಕರಾರಿನಲ್ಲಿ ನನ್ನ ತಾಯಿ ಮಾಡಿಸಿದ್ದಾರೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. 1999 ರಿಂದ ಇಂದಿನವರೆಗೂ ಯಾವುದೇ ಕಂದಾಯವನ್ನು ದಾವಾಸ್ವತ್ತಿನ ಕುರಿತು ನಾವು ಕಟ್ಟಿಲ್ಲ.

ದಾವಾಆಸ್ತಿಗಳ ಪೈಕಿ ಆರ್ ಪಿ ರಸ್ತೆಯ 12 ನೇ ಕ್ರಾಸ್ ನಲ್ಲಿ ಒಂದು ವಾಣಿಜ್ಯ ಮಳಿಗೆ ಇದೆ ಎಂದರೆ ನಿಜ. ಅದರಲ್ಲಿ ನೆಲಅಂತಸ್ತಿನಲ್ಲಿ 2 ಮಳಿಗೆ ಹಾಗು ಮೇಲಂತಸ್ತಿನಲ್ಲಿ 2 ಮಳಿಗೆ ಇದೆ. ಒಂದು ಅಂಗಡಿಯಲ್ಲಿ ನನ್ನ ಮಾವ ಚಂದ್ರಶೇಖರರವರು ಬಟ್ಟೆ ಅಂಗಡಿ ನೆಡೆಸುತ್ತಿದ್ದಾರೆ ಹಾಗು ಇನ್ನೊಂದು ಮಳಿಗೆಯಲ್ಲಿ ವಾಹನದ ಬಿಡಿಭಾಗದ ಅಂಗಡಿ ಇದೆ ಹಾಗು ಮೇಲಂತಸ್ತಿನಲ್ಲಿ ಒಂದು ಪೊಟೋ ಸ್ಟುಡಿಯೋ ಇದೆ ಹಾಗು ಇನ್ನೊಂದು ಮಳಿಗೆಯಲ್ಲಿ ವಕೀಲರ ಕಛೇರಿ ಇದೆ. ಸದರಿ ವಕೀಲರ ಹೆಸರು ಗೊತ್ತಿಲ್ಲ. ಬಟ್ಟೆ ಅಂಗಡಿ ಅಥವಾ ಆಟೋಪಾರ್ಟ್ ವ್ಯಾಪಾರ ಮಾಡುತ್ತಿರುವ ವ್ಯಕ್ತಿಗಳ ಹೆಸರು ಗೊತ್ತಿಲ್ಲ. ಅದು ಬಾಡಿಗೆಗೆ ಕೊಟ್ಟಿರುವ ಮಳಿಗೆಗಳಾಗಿವೆ ಹೊರತು ಭೋಗ್ಯಕ್ಕೆ ಕೊಟ್ಟಿರುವುದು ಅಲ್ಲ. ಸದರಿ ಬಾಡಿಗೆ ಹಣ ಎಷ್ಟು ಎಂದು ಗೊತ್ತಿಲ್ಲ.

ದಾವಾ ಸ್ವತ್ತಿನಲ್ಲಿ ಒಂದು ಜಮೀನು ಇದೆ ಹಾಗು ಅದು 1 ಎಕರೆ 29 ಗುಂಟೆ ಇದ್ದು

ಹರತಲೆ ಗ್ರಾಮದಲ್ಲಿ ಇದೆ. ಕೆಲವೊಮ್ಮೆ ನನ್ನ ತಾಯಿಜೊತೆ ನಾನು ಸದರಿ ಜಮೀನಿನ ಬಳಿ ಹೋಗಿದ್ದೆ. ಆರೀತಿ 10 ವರ್ಷಕ್ಕೂ ಹಿಂದೆ ಹೋಗಿದ್ದೆ. ಸದರಿ ಅಂಗಡಿಮಳಿಗೆಯ ಕಟ್ಟಡದ ನಿರ್ವಹಣೆಕುರಿತು ಅಂದರೆ ಸುಣ್ಣಾ ಬಣ್ಣಾ , ತೆರಿಗೆ ಇತ್ಯಾದಿಗಳ ಬಗ್ಗೆ ನಾವು ಯಾವುದಾದರೂ ಹಣ ಖರ್ಚು ಮಾಡಿದ್ದೇವೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ಜಮೀನಿನಲ್ಲಿ ವಾರ್ಷಿಕ ಎಷ್ಟು ಉತ್ಪತ್ತಿ ಬರುತ್ತೆ ಹಾಗೆ ಎಷ್ಟು ಖರ್ಚು ಆಗುತ್ತೆ ಎಂದು ನಮಗೆ ಗೊತ್ತಿಲ್ಲ.

ನಂಜನಗೂಡಿನ 2 ನೇ ಕ್ರಾಸ್ ನಲ್ಲಿ ನನ್ನ ತಾತನ ಮನೆ ಒಂದು ಇದೆ. ಅದರಲ್ಲಿ ನೆಲಅಂತಸ್ತಿನಲ್ಲಿ ನನ್ನ ಮಾವ ಚಂದ್ರಶೇಖರ್ ವಾಸವಿದ್ದಾರೆ ಹಾಗು ನೆಲ ಅಂತಸ್ತಿನಲ್ಲಿ ಒಂದೇಒಂದು ಕೋಣೆಯನ್ನು ಬಾಡಿಗೆಗೆ ಕೊಟ್ಟಿದ್ದಾರೆ ಹಾಗು ಮೇಲಂತಸ್ತಿನಲ್ಲಿ ಇರುವ ಅಂಶವನ್ನು ಒಬ್ಬರಿಗೆ ಬಾಡಿಗೆಗೆ ಕೊಟ್ಟಿದ್ದಾರೆ ಹಾಗು ಮೇಲುಗಡೆ ಇರುವ ಅಂತಸ್ತಿನಲ್ಲಿ ಒಂದು ರೂಮ್ ಅನ್ನು ನನ್ನ ಮಾವನೇ ಇಟ್ಟುಕೊಂಡಿದ್ದಾರೆ. ರಾಣಿ ಹಾಗು ವಸಂತ ಈ ದಾವೆಯನ್ನು ಸಲ್ಲಿಸಿದ್ದಾರೆ. ನನ್ನ ತಾಯಿ ಈ ದಾವೆಯನ್ನು ಸಲ್ಲಿಸಲು ತೊಂದರೆ ಇರಲಿಲ್ಲ. ರಾಣಿ ಹಾಗು ವಸಂತಾರವರು ದಾವೆ ಸಲ್ಲಿಸಿದ ನಂತರವೇ ನನ್ನ ತಾಯಿ ಕೂಡ ಪಾಲುಕೊಡಿ ಎಂದು ಕೇಳುತ್ತಿರುವುದೇ ಹೊರತು ಅದಕ್ಕೂ ಮೊದಲು ಕೇಳಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ ಕೇಳಿದ್ದರು ಆದರೆ ಪಾಲು ಕೊಟ್ಟಿಲ್ಲ. ರಾಣಿ ಹಾಗು ವಸಂತಾರವರ ಜೊತೆ ನನ್ನ ತಾಯಿ ಸೇರಿ ದಾವೆ ಸಲ್ಲಿಸಲು ತೊಂದರೆ ಇತ್ತೇ ಎಂದು ಕೇಳಿದರೆ ಅವರು ದಾವೆ ಸಲ್ಲಿಸುತ್ತಿರುವುದು ನನ್ನ ತಾಯಿಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತೇನೆ. ನನ್ನ ತಾತ ಬರೆದಿಟ್ಟಿದ್ದ ಮರಣಶಾಸನದ ಬಗ್ಗೆ ನನ್ನ ತಾಯಿಗೆ ಸಂಪೂರ್ಣ ಮಾಹಿತಿ ಇದ್ದ ಕಾರಣ ನನ್ನ ತಾಯಿ ಹಿಸ್ಸೆ ಕೇಳಿಲ್ಲ ಹಾಗು ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ವಾದಿಯ ಒತ್ತಾಸೆಗೆ ಮಣಿದು ನನ್ನ ತಾಯಿ ಹಿಸ್ಸೆ ಕೇಳುತ್ತಿರುವುದು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

| | | |
|---|---|---|
| ಓ ಎಸ್ | 72/2017 | ಡಿ.ಡಬ್ಲ್ಯೂ: 1 |

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.